ರಾಜ್ಯದಲ್ಲಿ ದಾದಿಯರಿಗೆ ಶಿಕ್ಷಣ ಕೊಡುವ ಕೇಂದ್ರಗಳು ಹಾಗೂ ಶಿಕ್ಷಣ ಪಡೆದವರ ಸಂಖ್ಯೆ

೧೮೧. ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

೧ ರಾಜ್ಯದಲ್ಲಿ ದಾದಿಯರಿಗೆ ಶಿಕ್ಷಣವನ್ನು ಕೊಡುವ ಎಷ್ಟು ಕೇಂದ್ರಗಳಿವೆ ?

೨ ಈ ಕೇಂದ್ರಗಳಲ್ಲಿ ಎಷ್ಟು ಮಂದಿ ಈಗ ಶಿಕ್ಷಣವನ್ನು ಪಡೆಯುತ್ತಿದ್ದಾರೆ ?

೩ ಈ ದಾದಿಯರನ್ನು ತರಬೇತಿಗೆ ಆರಿಸುವಾಗ ಅನುಸರಿಸುತ್ತಿರುವ ನೀತಿ ನಿಯಮಗಳೇನು ?

ಶ್ರೀ ಬಿ. ರಾಚಯ್ಯ (ಆರೋಗ್ಯ ಸಚಿವರು)

೧ ೧೯

೨ ೯೫೦

೩ ಕರ್ನಾಟಕ ಆಕ್ಸಿಲರಿ ನರ್ಸ್. ಮಿಡ್‌ವೈಫ್ (ತರಬೇತಿ) ನಿಯಮ ೧೯೮೨ ಅನುಸರಿಸಿ ಆಯ್ಕೆಯಾಗುತ್ತಿದೆ.

ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿ ವಾಹನ ಅಪಘಾತಗಳ ಸಂಖ್ಯೆ

೧೯೦. ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಗೃಹ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿ ಕಳೆದ ಮೂರು ವರ್ಷಗಳಿಂದ ಆಗಿರುವ ವಾಹನ ಅಪಘಾತಗಳೆಷ್ಟು ?

ಆ) ಈ ಅಪಘಾತಗಳಿಂದ ಎಷ್ಟು ಮಂದಿ ಅಸುನೀಗಿದ್ದಾರೆ ?

ಇ) ಸರ್ಕಾರಿ ಸಾರಿಗೆ ಸಂಸ್ಥೆಗಳ ಅಪಘಾತವೆಷ್ಟು ?

ಈ) ಸಾರಿಗೆ ಸಂಸ್ಥೆಗಳಿಗೆ ಸೇರಿದ ವಾಹನ ಅಪಘಾತಗೊಳಗಾದ ಎಷ್ಟು ಮಂದಿಗೆ ಪರಿಹಾರ ಮೊತ್ತವನ್ನು ಕೊಡಲಾಗಿದೆ ಹಾಗೂ ಕೊಟ್ಟಿರುವ ಮೊತ್ತವೆಷ್ಟು ?

ಶ್ರೀ ಆರ್. ಎಲ್. ಜಾಲಪ್ಪ (ಗೃಹ ಸಚಿವರು).—

ಅ)

ವರ್ಷ	ಅಪಘಾತಗಳು
೧೯೮೫	೫೬೦
೧೯೮೬	೫೭೭
೧೯೮೭	೬೧೩

ಆ)

ವರ್ಷ	ಅಸುನೀಗಿದವರು
೧೯೮೫	೧೩೧
೧೯೮೬	೧೦೫
೧೯೮೭	೧೫೫

ಇ)

ವರ್ಷ	ಅಪಘಾತಗಳು
೧೯೮೫	೮೧
೧೯೮೬	೭೨
೧೯೮೭	೯೬